that rather than adjourn the House, we should transact the business that has already commenced and it would not, in any measure, take away or detract from the importance of the matter which stands on its own merits and possesses an importance of its own; and which would not suffer merely because it is taken up on Thursday instead of Wednesday.

MR. SPEAKER.—Sri Madiah Gowda will speak.

ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಯವರೆ, ಗಡಿಸಮಸ್ಯೆಗೆ ಪ್ರಾಮುಖ್ಯಸ್ಥಾನ ಕೊಡಬೇಕಾಗಿದ್ದಂಥ ಒಂದು ವಿಷಯದಲ್ಲಿ ನಮ್ಮ ಸರ್ಕಾರದವರು ತಾಳಿರುವ ತಾತ್ಸಾರ ಮನೋಭಾವನೆಯ ನೀತಿಯನ್ನು ನಾವು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(Members of the Opposition staged a walk out.)

BUDGET ESTIMATES OF THE MYSORE STATE ELECTRICITY BOARD FOR 1966-67.

General Discussion.

†ಶ್ರೀ ಟಿ. ಮಾದಯ್ಯ ಗೌಡ (ರಾಮನಗರಂ).—ಮಾನ್ಯ ಸಭಾಪತಿಗಳೇ: ಮಾನ್ಯ ವಿದ್ಯುಚ್ಛಕ್ತಿಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕ ಅಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತಾ ಇದರ ವಿಚಾರದಲ್ಲಿ ನಾನು ನಾಲ್ಕು ಮಾತುಗಳಿನ್ನಾಡಲು ನನಗೆ ಅತ್ಯಂತ ಸಂತೋಷವಾಗುತ್ತದೆ. ಈ ವಿದ್ಯುಚ್ಛಕ್ತಿಯು ನಮ್ಮ ದೇಶದ ಒಂದು ಸೌಭಾಗ್ಯ. ಇಲ್ಲಿ ನಮಗಿರತಕ್ಕ ನೈಸರ್ಗಿಕ ಅವಕಾಶದಲ್ಲಿ ಬಹಳ ವರ್ಷಗಳ ಹಿಂದೆಯೇ ನಮ್ಮ ಹಿಂದಿನ ರಾಜಕಾರಣಿಗಳು ಹಾಗೂ ಅನೇಕ ಇಂಜಿನಿಯರುಗಳು ಪ್ರಪ್ರಥಮವಾಗಿ ಮೈಸೂರು ದೇಶದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರು ಮಾಡಿದರು. ಈ ದಿವಸ ಇದರಿಂದ ದೇಶ ಬೆಳಗುತ್ತಿದೆ, ಇದರಿಂದ ದೇಶದಲ್ಲಿ ಅನೇಕ ಉಪಯುಕ್ತ ಕೆಲಸಗಳಾಗುತ್ತಿವೆ, ಜನರು ಇಲ್ಲಿ ಅತ್ಯಂತ ಸುಖದಿಂದಿರುವ ಹಾಗೆ ಬಹಳಮಟ್ಟಿಗೆ ಸಹಾಯಕವಾಗಿದೆ. ನಮ್ಮ ದೇಶದಲ್ಲಿ ಪ್ರಪ್ರಥಮವಾಗಿ ವಿದ್ಯುಚ್ಛಕ್ತಿಯನ್ನು ತಯಾರಿಸಿದವರು, ಅನೇಕ ಇಂಜಿನಿಯರುಗಳು, ನಾವೆಂದು ಅವರನ್ನು ಸ್ಮರಿಸಿಕೊಳ್ಳಬೇಕಾಗಿದೆ. ಅಂಥವರಲ್ಲಿ ಮುಖ್ಯರಾದವರೆಂದರೆ: ಫ್ಯಾರಡೆ, ಫ್ಲೋರ್ಟ್ಜ್ ಮತ್ತು ಹಯಾತ್‌ರವರು—ಇವರ ಹೆಸರುಗಳನ್ನು ನಾವು ಕೃತಜ್ಞತೆಯಿಂದ ನೆನಪಿಟ್ಟುಕೊಳ್ಳಬೇಕಾಗಿದೆ. ಇತ್ತೀಚೆಗೆ ನಮ್ಮಲ್ಲಿ ಇದನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ತಯಾರಿಸತಕ್ಕಾಗುತ್ತಿದೆ. ದೇಶಾಭಿವೃದ್ಧಿಗೆ ಇದರಿಂ ಹೆಚ್ಚಿನ ಸಹಾಯವಾಗುವುದರಿಂದ ನಮ್ಮ ಸರ್ಕಾರದವರು ಬಹಳ ಹಣವನ್ನು ವ್ಯಯಮಾಡಿ ಶರಾವತಿಯಲ್ಲೂ ವಿದ್ಯುಚ್ಛಕ್ತಿಯನ್ನು ತಯಾರಿಸುವುದಕ್ಕೆ ಪ್ರಾರಂಭಮಾಡಿದ್ದಾರೆ. ನಮ್ಮಲ್ಲಿ ವಿದ್ಯುಚ್ಛಕ್ತಿ ಹೆಚ್ಚಿದಷ್ಟೂ ದೇಶದಲ್ಲಿ ಕೈಗಾರಿಕಾ ಬೆಳವಣಿಗೆ ಹೆಚ್ಚುತ್ತದೆ. ಅದರಲ್ಲಿ ಯಾವ ಸಂದೇಹವೂ ಇಲ್ಲ ಅದರ ಈಗ ಇದರ ಅಭಿವೃದ್ಧಿಯನ್ನು ಒಂದು ಕಾರ್ಪೊರೇಷನ್ನಿಗೆ ವಹಿಸಿಕೊಟ್ಟಿದ್ದಾರೆ. ಆ ಕಾರ್ಪೊರೇಷನ್ನಿನವರೂ ಸಹಾ ಬಹಳ ಪ್ರಯತ್ನದಿಂದ ಇವರ ಅಭಿಲಾಷೆಯನ್ನು ನಡೆಸುತ್ತಿದ್ದಾರೆ. ಆದರೆ ನಾವು ಇಲ್ಲಿ ಇದರ ಬಗ್ಗೆ ಪ್ರಸ್ತಾಪಮಾಡುವಾಗ ನಮ್ಮ ಇಬ್ಬಹುದಾದ ಕೆಲವು ಸಂಶಯಗಳು ನಿವಾರಣೆಯಾಗಬಹುದೆಂದು ನಾನು ಭಾವಿಸಿದ್ದೇನೆ. ಹೆಚ್ಚು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಿರುವುದು ಹಣವನ್ನು ಗಳಿಸುವುದಕ್ಕೆ ಎಂಬ ಒಂದು ಭಾವನೆ ಜನಸಾಮಾನ್ಯರಲ್ಲಿ ಮೂಡಿರುವಂದೆ ಭಾಸವಾಗುತ್ತದೆ. ಆದರೆ ಅದರಲ್ಲಿ ಅಂಥ ತಪ್ಪೇನೂ ಇರುವುದಿಲ್ಲ, ಆದರೆ ಇದನ್ನು ಜನತೆಯ ಉಪಕಾರಕ್ಕಾಗಿ ಹೆಚ್ಚು ಹೆಚ್ಚಾಗಿ ಬಳಸಬೇಕೆಂಬುದರಲ್ಲಿ ನಾನೂ ಒಬ್ಬ. ಈ ದಿವಸ ಇದನ್ನು ಕೈಗಾರಿಕೆಗಳಿಗೇ ಹೆಚ್ಚಿನ ಮಟ್ಟದಲ್ಲಿ ಒದಗಿಸತಕ್ಕಾಗುತ್ತಿದೆ. ಆ ಕಾರಣದಿಂದಲೇ ನಮ್ಮಲ್ಲಿ ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳು ಪ್ರಾರಂಭವಾಗುವುದಕ್ಕೆ ಅವಕಾಶವಾಯಿತು. ದೇಶದ ಅಭಿವೃದ್ಧಿಯೂ ಆಯಿತು. ಆದರೆ ದೇಶದಲೆಲ್ಲ ನಡೆಯತಕ್ಕ ವ್ಯವಸಾಯಕ್ಕೆ ಎಷ್ಟು ಅಧ್ಯತೆಯನ್ನು ಕೊಡಬೇಕೋ ಅಷ್ಟನ್ನು ಕೊಡುತ್ತಿಲ್ಲ ಎಂದು ಹೇಳಿದರೆ ಅದರಲ್ಲಿ ತಪ್ಪೇನೂ ಇಲ್ಲ. ಈ ವಿಚಾರದಲ್ಲಿ ವ್ಯವಸಾಯಕ್ಕೂ ಸಹಾ ಅಧ್ಯತೆಯನ್ನು ಕೊಡಲೇ ಬೇಕು. ಆದರೆ ಇಲ್ಲಿ ಲೀಕೇಜಾಗುತ್ತೆಂದು ಹೇಳುತ್ತಿದ್ದಾರೆ. ಸಾಧ್ಯವಾದಮಟ್ಟಿಗೂ ಅದನ್ನು ಕಡಮೆ ಮಾಡಬೇಕು. ಅದಷ್ಟೂ ಗಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚು ಹೆಚ್ಚಾಗಿ ಒದಗಿಸಬೇಕೆಂದು ಹೇಳತಕ್ಕವರಲ್ಲಿ ನಾನೂ ಒಬ್ಬ. ನಾನು ಇರಿಗೇಷನ್ ಪಂಪ್‌ಸೆಟ್ಟುಗಳ ವಿಚಾರದಲ್ಲಿ ಅವಷ್ಟೂ ಒತ್ತಾಯ ಪೂರ್ವಕವಾಗೇ